ಅಸಲು ದಾವಾ ನಂ.5/2015

ಡಿ ಡಬ್ಲ್ಯೂ : 1

(ಇಂದು ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ ಎಸ್ ಪಿ ರವರಿಂದಃ

ನಾನು 8ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂಬರ್ 33 ಮೂಲತಃ ಸರ್ಕಾರಿ ಆಸ್ತಿ ಎಂದರೆ ಸರಿ. ಸದರಿ ಸರ್ವೆ ನಂಬರ್ ನ ಒಟ್ಟು ವಿಸ್ತೀರ್ಣ ಎಷ್ಟು ಎಂದು ಗೊತ್ತಿಲ್ಲ. ನಾವು ಖರೀದಿಸಿದ ಆಸ್ತಿಯ ಸರ್ವೆ ನಂಬರ್ 33 ಎಂದರೆ ಸಾಕ್ಷಿ 33/1ಬಿ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 33/1ಬಿ ಆಗುವ ಮೊದಲು ಅದು 33 ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 33/1ಬಿ ಆಸ್ತಿಯನ್ನು ಶಾಂತಮ್ಮ ನವರಿಂದ ಖರೀದಿಸಿರುತ್ತೇನೆ. ಶಾಂತಮ್ಮನವರಿಗೂ ಸದರಿ ಆಸ್ತಿ ದರಕಾಸ್ತು ಮೂಲಕ ಮಂಜೂರಾಗಿರುತ್ತದೆ. ನಾನು ಖರೀದಿಸಿದ ಆಸ್ತಿಯ ಚಕ್ಕುಬಂದಿ ಹೇಳಲು ಬರುತ್ತದೆ. ನಾನು ಖರೀದಿಸಿದ ಆಸ್ತಿಯ ಪೂರ್ವಕ್ಕೆ ಮಲ್ಲಿಕಾರ್ಜುನ ರವರ ಜಮೀನು, ಪಶ್ಚಿಮಕ್ಕೆ ಅಲಗಯ್ಯ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಶ್ರೀನಿವಾಸ ರವರ ಜಮೀನು ಇರುತ್ತದೆ.

ವಾದಿ ರುದ್ರೇಗೌಡ ನನಗೆ ಗೊತ್ತಿಲ್ಲ. ನಾನು ವಾದಿಯ ವಿರುದ್ಧ 2011 ರಲ್ಲಿ ದಾವೆ ದಾಖಲಿಸಿದ್ದೆ. ನನಗೆ ಕನ್ನಡ ಓದಲು ಬರುವುದಿಲ್ಲ, ಆದರೆ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ. ಸರ್ವೆ ನಂಬರ್ 33ರಲ್ಲಿ ವಾದಿಗೆ 2 ಎಕರೆ ಮಂಜೂರಾಗಿದೆ ಎಂದರೆ ಸರಿಯಲ್ಲ. ಮಂಜೂರಾಗುವಾಗ ನಕಾಶೆ ಆಗಿರುತ್ತದೆ ಎಂದರೆ ಸರಿಯಲ್ಲ. ಅ.ದಾ 116/2011 ರಲ್ಲಿ ಮಲ್ಲಯ್ಯನವರ ವಿರುದ್ಧ ದಾವೆ ದಾಖಲಿಸಿದ್ದೆ. ಸರ್ವೆ ನಂಬರ್ 33 ರಲ್ಲಿ 2 ಎಕರೆ ವಿಸ್ತೀರ್ಣದ ಪೂರ್ವಕ್ಕೆ ನಾಗಣ್ಣನವರ ಜಮೀನು, ಪಶ್ಚಿಮಕ್ಕೆ ಮಲ್ಲಯ್ಯನ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರವಿ ರವರ ಜಮೀನು ಈ ಮಧ್ಯೆ ಇರುವ ಆಸ್ತಿ ವಾದಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಬೇಲೂರಿನಿಂದ ಪ್ರಸಾದಿಹಳ್ಳಿಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

ನಾನು ಖರೀದಿಸಿದ ಆಸ್ತಿಯ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮಗೆ ಕ್ರಯಕ್ಕೆ ಕೊಟ್ಟ ಮೂಲ ಮಾಲೀಕರಿಗೆ ಕೊಟ್ಟ ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ಮೂಲ

ಮಾಲೀಕರಿಗೆ ಕೊಟ್ಟ ನಕಾಶೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 33 ರಲ್ಲಿ ನಮ್ಮ ಮೂಲ ಮಾಲೀಕರಿಗೆ ಮಂಜೂರಾದ ಜಮೀನೇ ಬೇರೆ ಮತ್ತು ವಾದಿಗೆ ಮಂಜೂರಾದ ಜಮೀನು ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ ತನಗೆ ಮಂಜೂರಾದ ಆಸ್ತಿಯಲ್ಲಿ ಬೆಳೆಯನ್ನು ಬೆಳೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ತೊಂದರೆ ನೀಡಿದ ಕಾರಣ, ವಾದಿ ಈ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು